**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ: 82/2014** **CW**-10 **PW**-9

**ಸಾಕ್ಷಿಯನ್ನು ದಿಃ 20.06.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಚಂದ್ರಶೇಖರ್ ಆಚಾರ್ ಅಲಿಯಾಸ್ ಬಾಬು |
| ತಂದೆಯ ಹೆಸರುಃ | ಕೃಷ್ಣಾಚಾರ್ |
| ವಯಸ್ಸುಃ | 69 ವರ್ಷ |
| ವೃತ್ತಿಃ | ಅಕ್ಕಸಾಲಿಗ |
| ವಾಸ ಸ್ಥಳಃ | ಹಾಸನ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಹಾಸನದಲ್ಲಿ ಶೊಭ ಜ್ಯುವೆಲಸ್‌ಸ್ ಎಂಬ ಚಿನ್ನ ಬೆಳ್ಳಿ ಅಂಗಡಿ ಇರುತ್ತದೆ. ಈಗ ಸಾಕ್ಷಿಗೆ ನಿ ಪಿ 6 ರ ಅಮಾನತ್ತು ಮಹಜರ್ ಅನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 10-12 ವರ್ಷಗಳ ಹಿಂದೆ ಮಾಡಿರುತ್ತೇನೆ. ಎಲ್ಲಿ ಮತ್ತು ಯಾವ ಕಾರಣಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿಪಿ-6 ರಲ್ಲಿರುವ ವಿಚಾರಗಳು ಗೊತ್ತಿಲ್ಲ. ನನ್ನ ಜೊತೆ ನಿಪಿ-6 ಕ್ಕೆ ಯಾರು ಸಹಿ ಮಾಡಿದ್ದಾರೆ ಗೊತ್ತಿಲ್ಲ. ನಾನು ಪೊಾಲೀಸರ ಮುಂದೆ ಯಾವುದೇ ಚಿನ್ನಾಭರಣಗಳನ್ನು ಹಾಜರುಪಡಿಸಿರುವುದಿಲ್ಲ ಮತ್ತು ಅವುಗಳನ್ನು ನನ್ನ ಮುಂದೆ ವಶಪಡಿಸಿಕೊಂಡಿರುವುದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ .

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ  ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 21.11.2013 ರಂದು ಪೋಲೀಸರು ನ್ಯಾಯಾಲಯದ ಮುಂದಿರುವ ಆರೋಪಿಯ ಜೊತೆಗೆ ನಮ್ಮ ಅಂಗಡಿಗೆ ಬಂದಿದ್ದು ಆರೋಪಿಯು ನಮ್ಮ ಅಂಗಡಿಯಲ್ಲಿ

ಅಡಮಾನ ಮಾಡಿದ್ದ ಐಟಂ ನಂಬರ್ 1 ರಿಂದ 23 ಚಿನ್ನದ ಒಡವೆಗಳನ್ನು ಮತ್ತು ಬೆಳ್ಳಿ ಸಾಮ್ಹಾಗ್ರಿಗಳನ್ನು ನಾನು ಪೋಲೀಸರ ಮುಂದೆ ಹಾಜರುಪಡಿಸಿದ್ದು ಅವುಗಳನ್ನು ಪೋಲೀಸರು ಮಧ್ಯಾಹ್ನ 02.30 - 04.00 ಗಂಟೆಯವರೆಗೆ ಮಹಜರ್ ಮಾಡಿ ಚಾ ಸಾ 6 ಮತ್ತು 7 ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 21.11.2013 ರಂದು ಈ ಕೆಳಕಂಡಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಅವರ ಹೇಳಿಕೆ ಭಾಗವಾದ ನಾನು ಮೇಲ್ಕಂಡ ವಿಳಾಸದಲ್ಲಿ ..............................................................................................

.....................................,, ಗುರುತಿಸುತ್ತೇನೆ ಎಂಬ ಭಾಗವನ್ನು ಸಂಪೂರ್ಣವಾಗಿ ಓದಿ ಹೇಳಲಾಗಿ ಸಾಕ್ಷಿಯು ಅಲ್ಲಗಳೆದಿದ್ದರಿಂದ ಹೇಳಿಕೆಯ ಭಾಗವನ್ನು ನಿ ಪಿ 12 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲಾ.**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**Sd/-**

**(ದೀಪು.ಬಿ.ಸಿ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**